ರೂಪಾಯಿಗಳನ್ನು ಬಳಸಿಕೊಂಡಿದ್ದೇವೆ. ಈ ವರ್ಷಕ್ಕೆ ಒಂಭತ್ತು ಕೋಟಿ ರೂಪಾಯಿಗಳಿದ್ದು, ಈ ಹಣವನ್ನು ರಾಜ್ಯಾದ್ಯಂತ ಎಲ್ಲ ಕಡೆಗಳಲ್ಲಿ ಅಂಗನವಾಡಿ ಕೇಂದ್ರದ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳುತ್ತೇವೆ. ಇನ್ನು ನಿರ್ಮಾಣಗೊಂಡ ಕಟ್ಟಡಗಳು ಸೋರುತ್ತಿರುವುದಾಗಿ ತಿಳಿಸಿರುವುದರ ಬಗ್ಗೆ ಹೇಳುವುದಾದರೆ, ಜಿಲ್ಲಾ ಪಂಚಾಯತ್‌ನವರೇ ಜವಾಬ್ದಾರಿ ತೆಗೆದುಕೊಳ್ಳುವ ಮೂಲಕ ಕಟ್ಟಡ ನಿರ್ಮಾಣ ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಕಟ್ಟಡ ನಿರ್ಮಾಣ ಸರಿಯಾಗಿ ನಡೆದಿಲ್ಲವೆಂದರೆ ಕಟ್ಟಡ ಕಟ್ಟಿರುವ ಸಂಬಂಧಪಟ್ಟ ಕಂಟ್ರಾಕ್ಟರ್‌ನಿಂದ ಬಾಕಿ ಕ್ರಮಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ತಮಗೆ ಗೊತ್ತಿರುವ ಂತೆ ನಮ್ಮ ಇಲಾಖೆಯು ಜಿಲ್ಲಾ ಪಂಚಾಯತ್‌ಗೆ ಹಣ ಒದಗಿಸಿಕೊಟ್ಟರೆ ಅವರು ಕಟ್ಟಡ ನಿರ್ಮಾಣ ಮಾಡುವ ಕೆಲಸ ಮಾಡುತ್ತಾರೆ. ಅದರ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತ್‌ನ ಸದಸ್ಯರುಗಳೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅಧ್ಯಕ್ಷರು ದೊಡ್ಡಬಳ್ಳಾಪುವ ವಿಚಾರವನ್ನಷ್ಟೇ ನಾವು ಇಲ್ಲಿ ಮಾತನಾಡುತ್ತಿರತಕ್ಕದ್ದು ದೊಡ್ಡಬಳ್ಳಾಪುರದ ವಿಷಯದ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಮಂತ್ರಿಗಳಿಗೆ ನಮಗೆ ನಿಮಗೆಲ್ಲಾ ಜಿಲ್ಲಾಪಂಚಾಯಿತಿಯ ಬಗ್ಗೆ ಗೊತ್ತಿದೆ. ಜಿಲ್ಲಾಪಂಚಾಯಿತಿಯಲ್ಲಿ ಎಷ್ಟರಮಟ್ಟಿಗೆ ಕಟ್ಟಡಗಳು, ರಸ್ತೆಗಳು ಆಗುತ್ತಿದೆ ಎಂಬುದು ಗೊತ್ತಿದೆ. ಅದರ ಬಗ್ಗೆ ನಾವೇ ನೋಡಿಕೊಳ್ಳಬೇಕೆಂದರೆ, ಜಿಲ್ಲಾಪಂಚಾಯಿತಿಯಲ್ಲಿ ಶಾಸಕರಿಗೆ ಯಾವುದೇ ವಿಧವಾದಂಥ ಮಾಹಿತಿಯೂ ಇಲ್ಲ ನಮಗೆ ಏನೂ ಗೊತ್ತೂ ಆಗುವುದಿಲ್ಲ. ಆದ್ದರಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳು ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಶಿವಾನಂದಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಚಿವರು 660 ಕೋಟಿ ನಬಾರ್ಡ್ ಸಾಲ ಎಂದು ಹೇಳುತ್ತಿದ್ದಾರೆ, ರೆಕಾರ್ಡ್‌ನಲ್ಲಿ ಹೋಗಿದೆ. ಕೇಳಿ ಒಂದು ಸ್ವಲ್ಪ.....

ಅಧ್ಯಕ್ಷರು : ದೊಡ್ಡಬಳ್ಳಾಪುರ ಕ್ಷೇತ್ರಕ್ಕಾಗಿ ಕೇಳುತ್ತಿದ್ದಾರೆ.

ಶ್ರೀ ಎಸ್. ಶಿವಾನಂದಪಾಟೀಲ್ : ದೊಡ್ಡಬಳ್ಳಾಪುರಕ್ಕೆ ನಬಾರ್ಡ್‌ನವರು 660 ಕೋಟಿ ಸಾಲವನ್ನು ಕೊಡುತ್ತಾರೆಯೇ?

ಅಧ್ಯಕ್ಷರು : ಅವರು ಟೋಟೆಲ್ ಹೇಳುತ್ತಿರುವುದು. ಎಂಟೈರ್ ಸ್ಟೇಟ್ ಅವರು ಹೇಳುತ್ತಿರುವುದು.

ಶ್ರೀ ಎಸ್. ಶಿವಾನಂದಪಾಟೀಲ್ : ಟೋಟಲ್ ಆಗಿಯೂ 660 ಕೋಟಿ ಕೊಡಲು ಆಗುವುದಿಲ್ಲ. 660 ಲಕ್ಷ ಎಂದು ಹೇಳಬೇಕಾಗಿತ್ತು. ಕೋಟಿ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಆಯಿತು 660 ಲಕ್ಷ ಅಂದರೆ 6 ಕೋಟಿಯಾಯಿತು ಬಿಡಿ.

ಮಲಪ್ರಭಾ ನದಿಗೆ ಮಹಾದಾಯಿ ಜೋಡಣೆ

412 (2970) ಶ್ರೀ ಬಿ.ಆರ್. ಯಾವಗಲ್ (ನರಗುಂದ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಹಾದಾಯಿ ಕಣಿವೆಯ ನೀರನ್ನು ಮಲಪ್ರಭಾ ನದಿಗೆ ಜೋಡಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು:

ಆ) ಮಹಾದಾಯಿ ನದಿಯ ಉಪ ನದಿಗಳಾದ ಬಂಡೂರಿ, ಕಳಸಾ ಇವುಗಳ ನೀರನ್ನು ಪಡೆಯಲು ಇರುವ ತೊಂದರೆಗಳೇನು: ಹಾಗೂ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಮಹದಾಯಿ ತಿರುವು ಯೋಜನೆಯನ್ನು ಕಾರ್ಯಗತಗೊಳಿಸಲು ಈ ಕೆಳಕಂಡ ಯೋಜನೆಗಳಿಗೆ ಅನುಕ್ರಮವಾಗಿ ರೂ. 44.78 ಕೋಟಿ ಹಾಗೂ ರೂ. 49.20 ಕೋಟಿ ಅಂದಾಜಿಗೆ ದಿ: 22-8-2000 ರಂದು ಸರ್ಕಾರದ ಅನುಮೋದನೆಯನ್ನು ನೀಡಿದೆ.

1. ಖಾನಾಪೂರ ತಾಲ್ಲೂಕಿನ ಕಣಕುಂಬಿ ಗ್ರಾಮದ ಹತ್ತಿರ ಕಳಸಾನಾಲಾದಿಂದ 3.56 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ವರ್ಗಾಯಿಸುವುದು.
2. ಖಾನಾಪೂರ ತಾಲ್ಲೂಕಿನ ನೆರ್ಸೆ ಗ್ರಾಮದ ಹತ್ತಿರ ಬಂಡೂರು ನಾಲಾದಿಂದ 4.00 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ವರ್ಗಾಯಿಸುವುದು.

ಆ) ದಿನಾಂಕ: 22.7.1992 ರಂದು ಪ್ರಥಮ ಬಾರಿಗೆ, ಪಣಜಿಯಲ್ಲಿ ಗೋವಾ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವಿ ಯೋಜನೆಗಳ ಮಂತ್ರಿಗಳ ನಡುವೆ ಮಹಾದಾಯಿ ಯೋಜನೆಯ ಕುರಿತು ಸಭೆ ಜರುಗಿತು. ಸಭೆಯಲ್ಲಿ ಎರಡೂ ರಾಜ್ಯಗಳ ಅಧಿಕಾರಿಗಳನ್ನು ಹೊಂದಿರುವ ತಾಂತ್ರಿಕ ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ದಿನಾಂಕ: 27.09.93 ಮತ್ತು 04.10.96 ರಂದು ಸಭೆಯನ್ನು ನಡೆಸಿದ್ದು, ದಿ: 10.09.96, 25.4.98 ಹಾಗೂ 10.1.2000 ರಂದು ಗೋವಾ ರಾಜ್ಯದೊಂದಿಗೆ ಮಾತುಕತೆಗಳು ನಡೆದಿರುತ್ತದೆ. ನವದೆಹಲಿಯಲ್ಲಿ ಅಂತರ್ ರಾಜ್ಯ ಸಭೆಗಳು ದಿ: 29.5.2001 ಮತ್ತು 27.3.2002 ಜರುಗಿದ್ದು, ಕರ್ನಾಟಕ ರಾಜ್ಯದ ಮನವಿಗಳಂತೆ ಹಾಗು ಕೇಂದ್ರ ಸರ್ಕಾರದದೊಂದಿಗೆ ಜರುಗಿಸಿದ ಪತ್ರ ವ್ಯವಹಾರಗಳಂತೆ ದಿ: 30.4.2002ರಂದು ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಮಹಾದಾಯಿಸಿಕೊಳ್ಳದಿಂದ 7.56 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ವರ್ಗಾಯಿಸಲು ಕೇಂದ್ರ ಸರ್ಕಾರವು ತಾತ್ವಿಕ ಒಪ್ಪಿಗೆಯನ್ನು ನೀಡಿತ್ತು. ಗೋವಾ ರಾಜ್ಯದ ಒತ್ತಡದ ಕಾರಣ ಸದರಿ ಒಪ್ಪಿಗೆಯನ್ನು ದಿ: 19.9.2002ರಂದು ಕೇಂದ್ರ ಸರ್ಕಾರವು ತಡೆಹಿಡಿದಿರುತ್ತದೆ. ಈ ತಡೆ ಆದೇಶವನ್ನು ತೆರವುಗೊಳಿಸುವ ಕುರಿತು ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರವನ್ನು ಆಗ್ರಹಪೂರ್ವಕವಾಗಿ ಹಲವಾರು ಪತ್ರಗಳಲ್ಲಿ ಕೋರಿರುತ್ತಾರೆ. ಗೋವಾ ರಾಜ್ಯವು ಮಹಾದಾಯಿ ನದಿ ವಿವಾದ ಮಂಡಳಿಯ ರಚನೆ ಕುರಿತು ಮಾಡಿರುವ ಮನವಿಯ ಬಗ್ಗೆ ಉಭಯ ರಾಜ್ಯಗಳೊಂದಿಗೆ ಚರ್ಚಿಸಿ ಒಂದು ನಿರ್ಧಾರಕ್ಕೆ ಬರಲು ದಿನಾಂಕ: 16.11.02ರಂದು ಸಂಬಂಧಿಸಿದ ಮೂರು ರಾಜ್ಯಗಳಾದ ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾ ರಾಜ್ಯಗಳ ನಡುವೆ ಒಂದು ಸಭೆಯನ್ನು ಏರ್ಪಡಿಸಿದ್ದು ಕಾರಣಾಂತರಗಳಿಂದ ಸಭೆಯನ್ನು ಮುಂದೂಡಲಾಗಿದ್ದು ನಂತರ ದಿನಾಂಕ: 20.12.02ರಂದು ಸದರಿ ಸಭೆಯನ್ನು ನವದೆಹಲಿಯಲ್ಲಿ ಜರುಗಿಸಿದ್ದು ಈ ಸಭೆಯಲ್ಲಿ ಮಹಾದಾಯಿ ಕಣಿವೆಯಲ್ಲಿ ದೊರಕುವ ಒಟ್ಟು ನೀರಿನ ಪ್ರಮಾಣದ ಬಗ್ಗೆ ಕೇಂದ್ರ ಜಲ ಆಯೋಗದಿಂದ ಯೀಲ್ಡ್ ಸೀರೀಸ್ ಅಧ್ಯಯನವನ್ನು (Yield series studies) ಮಾರ್ಚ್ 2003 ರೊಳಗೆ ಪೂರ್ಣಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ರಜ್ಯ ಸರ್ಕಾರದ ಅಧಿಕಾರಿಗಳು ನವದೆಹಲಿಯ ಕೇಂದ್ರ ಜಲ ಆಯೋಗ ಕಚೇರಿಗೆ ಹೋಗಿ ಸದರಿ

ಅಧ್ಯಯನದಲ್ಲಿ ಭಾಗವಹಿಸಿ ಬಂದಿರುತ್ತಾರೆ. ಅಧ್ಯಯನ ಕಾರ್ಯವು ಪೂರ್ಣಗೊಂಡಿದ್ದು ಮುಂದಿನ ನಿರ್ದೇಶನವನ್ನು ಕೇಂದ್ರ ಸರ್ಕಾರದಿಂದ ತಡೆಹಿಡಿದಿರುವ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ದಿ: 21.4.2003 ರಂದು ಮಾನ್ಯ ಜನ ಸಂಪನ್ಮೂಲ ಸಚಿವರಿಂದ ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವರಿಗೆ ಪತ್ರ ಬರೆದು ಕೋರಲಾಗಿದೆ.

ಜಲ ಸಂಪನ್ಮೂಲ ಸಚಿವರು ದಿ: 11.7.03 ರಂದು ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವರನ್ನು ಭೇಟಿಯಾಗಿ ಮತ್ತೊಂದು ಮನವಿಯನ್ನು ನೀಡಿ, ಕರ್ನಾಟಕ ತನ್ನ ಯೋಜನಾ ಕೆಲಸ ಪ್ರಾರಂಭಿಸಲು ಪರವಾಸಿಗೆಗೆ ಒತ್ತಾಯಿಸಲಾಗಿದೆ.

ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವರು ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಸಭೆ ಕರೆಯುವುದಾಗಿ ತಿಳಿಸಿದ್ದಾರೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ನಾನು ಮಹದಾಯಿ ಯೋಜನೆಯ ಬಗ್ಗೆ ಕೇಳಿದಂಥ ಪ್ರಶ್ನೆಗೆ ಸಂಕ್ಷಿಪ್ತವಾಗಿ ಸರ್ಕಾರ ಉತ್ತರವನ್ನು ನೀಡಿದೆ. ಆದರೆ ಮಲಪ್ರಭಾ ಯೋಜನೆಗೆ ವರವಾಗಿ ಬರುವಂಥ ಒಂದು ಯೋಜನೆಯಾಗುವಂಥ ಸಾಧ್ಯತೆ ಇದೆ. ಅದಕ್ಕಾಗಿ ಇವತ್ತು ಆ ಮಲಪ್ರಭಾ ಯೋಜನೆಯಲ್ಲಿ ಎಷ್ಟು ನೀರನ್ನು ಅಂದಾಜು ಮಾಡಿ ಮಾಡಲಾಗಿತ್ತು. ಮತ್ತು ಕಳೆದ ಹತ್ತಾರು ವರ್ಷದಲ್ಲಿ ವಾಸ್ತವಿಕವಾಗಿ ಅಲ್ಲಿ ಎಷ್ಟು ನೀರು ಬರಲು ಸಾಧ್ಯವಾಗಿದೆ? ಕೊರತೆ ಬಿದ್ದಂಥ ನೀರನ್ನು ಯಾವ ಮೂಲದಿಂದ ಸರ್ಕಾರ ತರಲು ಪ್ರಯತ್ನ ಮಾಡುತ್ತಿದೆ? ಮಹದಾಯಿ ಯೋಜನೆಯಿಂದ ಎಷ್ಟು ನೀರು ಹರಿದು ಹೋಗಿ ಅರಬ್ಬಿ ಸಮುದ್ರಕ್ಕೆ ಸೇರುತ್ತದೆ? ಆ ನೀರನ್ನು ಯಾವ ರೀತಿಯಾಗಿ ಕರ್ನಾಟಕ ತನ್ನ ಪಾಲನ್ನು ಪಡೆಯಲು ಸಾಧ್ಯವಾಗುತ್ತದೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಾವಗಲ್‌ರವರ ಪ್ರಶ್ನೆಗೆ ಸಂಕ್ಷಿಪ್ತವಾದ ಉತ್ತರವನ್ನು ಕೊಟ್ಟಿದ್ದೇವೆಂದು ಹೇಳಿದರು. ನಾವು ಸವಿವರವಾದಂಥ ಉತ್ತರವನ್ನು ಕೊಟ್ಟಿದ್ದೇವೆ. ಅವರು ಅತ್ಯಂತ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡಿದರು. ಮಲಪ್ರಭಾ ಯೋಜನೆಯನ್ನು ಕನ್‌ಸೀವ್ ಮಾಡಿದಾಗ ಕೆಲವು ವರ್ಷಗಳ ಹಿಂದಿನ ವರೆಗೆ 47 ಟಿ.ಎಂ.ಸಿ ನೀರನ್ನು ಆ ಯೋಜನೆಗಾಗಿ ನಾವು ಅಲೋಕೇಷನ್ ಮಾಡಿದ್ದೆವು. ಆದರೆ ಆ ಯೋಜನೆಯಲ್ಲಿ ಯಾವಾಗಲೂ 27 ಟಿ.ಎಂ.ಸಿ. ಗಿಂತ ಹೆಚ್ಚು ನೀರು ಬಂದು ಶೇಖರಣೆಯೇ ಆಗಲಿಲ್ಲ. ನಂತರ ಈ ಯೋಜನೆಯನ್ನು ಮಾಡತಕ್ಕ ಸಂದರ್ಭದಲ್ಲೇ, ಮಾನ್ಯ ಬಾಳೇಕುಂದ್ರಿಯವರಾಗಿರಲಿ, ಮಾನ್ಯ ಅಂಗಡಿಯವರಾಗಿರಲಿ ಹಿರಿಯ ಅಭಿಯಂತರುಗಳೆಲ್ಲಾ ಈ ಮಹಾದಾಯಿ ನೀರನ್ನು ಮಲಪ್ರಭಾದೊಂದಿಗೆ ಕೂಡಿಸುವ ಬಗ್ಗೆ ಚಿಂತನೆ ಮಾಡುತ್ತಿದ್ದರು, ಆ ರೀತಿಯಾದ ಪ್ರಸ್ತಾವನೆಗಳು ಸರ್ಕಾರದ ಮಟ್ಟದಲ್ಲಿದ್ದವು. ಹಲವಾರು ಸಭೆಗಳನ್ನು ಮಹದಾಯಿ ನದಿಯನ್ನು ಮಲಪ್ರಭಾ ನದಿಯೊಂದಿಗೆ ತಿರುಗಿಸುವ ಬಗ್ಗೆ ಗೋವಾ ಸರ್ಕಾರದೊಂದಿಗೆ ಪ್ರಯತ್ನ ಮಾಡಲಾಗಿದೆ. ಮಹಾದಾಯಿ ನದಿಗೆ ತಮಗೆ ಗೊತ್ತಿದ್ದ ಹಾಗೆ 52 ಕಿಲೋಮೀಟರ್ ನಮ್ಮ ಕರ್ನಾಟಕದಲ್ಲಿ ಹರಿದು ಹೋಗುತ್ತದೆ, 52 ಕಿಲೋಮೀಟರ್ ನಂತರ ಅದಕ್ಕೆ ಗೋವಾದಲ್ಲಿ ಮಾಂಡವಿ ಎಂದು ಕರೆಯುತ್ತಾರೆ. ಈ ಮಹಾದಾಯಿ – ಮಾಂಡವಿ ನದಿಯೇನಿದೆ ಇದರಲ್ಲಿ 220 ಟಿ.ಎಂ.ಸಿ. ನೀರು ನೇರವಾಗಿ ನಮ್ಮ ಖಾನಾಪುರ್ ಭಾಗದಿಂದ ನೀರನ್ನು ಹಿಡಿದುಕೊಂಡು ಸಮುದ್ರಕ್ಕೆ ಹೋಗಿ ಸೇರುತ್ತದೆ 220 T.M.C.

according to our Karnataka assessement and according to latest official assessments, that is of C.W.C. it is around 200 T.M.C. ಈ 200 ಟಿ.ಎಂ.ಸಿ. ಯೊಳಗೆ ಮಾನ್ಯ ಸಿಂಧ್ಯಾರವರ ಜೊತೆ ಮಾತನಾಡುವಾಗ ಹಲವಾರು ಸಂದರ್ಭಗಳಲ್ಲಿ ಇದನ್ನು ಪ್ರಸ್ತಾಪಮಾಡಿದ್ದೇನೆ. ಕರ್ನಾಟಕದ್ದಾಗಲಿ ಗೋವಾದ್ದಾಗಲಿ ಯಾವುದೇ ಒಂದು ಕಡೆ ಸಹ ಒಮದು ಟಿ.ಎಂ.ಸಿ. ನೀರನ್ನೂ ಸಹ ಬಳಕೆ ಮಾಡಿಕೊಂಡು ನೀರಾವರಿ ಮಾಡುತ್ತಿಲ್ಲ. It is just a criminal waste ನಾವೆಲ್ಲರೂ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಒಂದು ರೀತಿ ಮುಖ್ಯಪ್ರೇಕ್ಷಕರಾಗಿ ನೋಡುತ್ತಿದ್ದೇವೆ. ಗೋವಾ ಸರ್ಕಾರದವರಿಗೆ ಸಾಕಷ್ಟು ಸಂದರ್ಭಗಳಲ್ಲಿ, ಮಾನ್ಯ ರಾಮಕೃಷ್ಣ ಹೆಗಡೆಯವರಿದ್ದಾಗ, ಮಾನ್ಯ ಬೊಮ್ಮಾಯಿಯವರಿದ್ದಾಗ ತಾವೂ ಒಂದು ಸಲ ಹೋಗಿ ಚರ್ಚೆ ಮಾಡಿದ್ದೀರಿ, ನಾವು ಅವರಲ್ಲಿಗೆ ಹೋದಾಗಲೆಲ್ಲಾ ಅವರು ಚರ್ಚೆಯಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ, ಇದು ಬಹಳ ಒಳ್ಳೆಯ ಸ್ಕೀಮ್, ನೀರು ವೇಸ್ಟ್ ಆಗುತ್ತದೆ ಎಂದು ಹೇಳುತ್ತಾರೆ. ಆದರೆ ನಾವು ವಾಪಸ್ ಬಂದಮೇಲೆ ಮತ್ತೆ ಅಸೆಂಬ್ಲಿಯಲ್ಲಿ ಇದನ್ನು ನಾವು ಒಪ್ಪುವುದಿಲ್ಲವೆಂದು ಒಂದು ನಿಲುವನ್ನು ತೆಗೆದುಕೊಂಡು ಬಿಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ ರವರು ಗೋವಾದ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದಾರೆ. ಗೋವಾದ ಮುಖ್ಯಮಂತ್ರಿಗಳು ಐ.ಟಿ. ವಿಚಾರವಾಗಿ ಬಂದಿದ್ದಾಗಲೂ ಮುಖ್ಯಮಂತ್ರಿಯವರು ಮಾತನಾಡಿದರು, ನಾನೂ ಗೋವಾಕ್ಕೆ ಹೋಗಿ ಮಾತನಾಡಿ ಬಂದಿದ್ದೇನೆ. 220 ಟಿ.ಎಂ.ಸಿ. ನೀರು ವೇಸ್ಟ್ ಆಗಲು ಬಿಡಬಾರದೆಂದು ಸಾಕಷ್ಟು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದೇವೆ. ಅದರ ಜೊತೆಗೆ ಒಂದು ಹಂತದಲ್ಲಿ ಕೇಂದ್ರ ಸರ್ಕಾರದವರು ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ಕೊಟ್ಟರು. ಮಹಾದಾಯಿ ನೀರನ್ನು ತಿರುಗಿಸಿಕೊಳ್ಳದಿದ್ದರೆ ಹುಬ್ಬಳ್ಳಿ ಧಾರವಾಡದಂಥ ಮಹಾ ನಗರಗಳ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ, ಆದ್ದರಿಂದ 7.56 ಟಿ.ಎಂ.ಸಿ. ನೀರನ್ನು ಕಳಸಾ ಮತ್ತು ಬಂಡೂರಿನಾಲವನ್ನು ಡೈವರ್ಟ್ ಮಾಡಿಕೊಂಡು ಮಲಪ್ರಭಾಕ್ಕೆ ಹೆಚ್ಚುವರಿ ನೀರನ್ನು ಪಡೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳಿಸಿ ಅದಕ್ಕೆ ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್‌ನ್ನೂ ನಾವು ಪಡೆದುಕೊಂಡೆವು. ಆದರೆ ಕೇಂದ್ರ ಸರ್ಕಾರದವರು, ಮಾನ್ಯ ಜಗದೀಶ್‌ಶೆಟ್ಟರ್‌ರವರೆ ತಮಗೂ ಗೊತ್ತಿದ್ದಂತೆ, ಇನ್‌ಪಿನ್ಸಿಪಲ್ ಕ್ಲಿಯರೆನ್ಸ್‌ನ್ನು ಗೋವಾ ಸರ್ಕಾರದ ಒತ್ತಡದಕಾರಣ ಕರ್ನಾಟಕಕ್ಕೆ ಇಷ್ಟೊಂದು ಜಿನ್ಯೂನ್ ರಿಕ್ವೈರ್‌ಮೆಂಟ್ ಇದೆಯೆಂದು ನ್ಯಾಯಬದ್ಧವಾಗಿರುವ ಬೇಡಿಕೆಗೆ ಅವರ ಸ್ಪಂದಿಸದೆ ಆ ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್‌ನ್ನು ಅವರು ಅಬೆಯನ್ಸ್‌ನಲ್ಲಿ ಇಟ್ಟುಬಿಟ್ಟರು. ಅದಾದಮೇಲೆ ಒಂದು ಸಭೆ ಕರೆದರು, ಈಲ್ಡ್ ಬಗ್ಗೆ ಗೋವಾದವರು ತಕರಾರು ಮಾಡಿದರು, ನಾವು ಈಲ್ಡ್ ಸ್ಟಡೀಸ್ ನಾವೇನು ಮಾಡಿದ್ದೆವೋ ಅದನ್ನೂ ಕೊಟ್ಟೆವು. ಅಷ್ಟೇ ಅಲ್ಲ, ನೀರಿಯವರೂ ಏನು There will be no adverse infact on environment ಎಂದು ವಿವರವಾದ ವರದಿಯನ್ನು ಕೊಟ್ಟಿದ್ದರು ಅದನ್ನೂ, ಸಹ ಆ ಸಭೆಯಲ್ಲಿ ಮಂಡನೆ ಮಾಡಿದೆವು, ಮಾರ್ಚ್ ಒಳಗಾಗಿ ಎಲ್ಲಾ ರೀತಿಯ ಅಧ್ಯಯನ ಮುಗಿಸಿ ಸಭೆ ಕರೆಯುತ್ತೇವೆಂದು ಹೇಳಿದ್ದರು, ಆದ್ದರಿಂದ ನಾನು ಮಾನ್ಯ ಯಾವಗಲ್‌ರವರಿಗೆ ಬಹುಶಃ ಏಪ್ರಿಲ್‌ನಲ್ಲಿ ಸಭೆಯಾಗಬಹುದೆಂದು ಪ್ರಸ್ತಾಪ ಮಾಡಿದ್ದೆ. ಆದರೆ ಏಪ್ರಿಲ್‌ನಲ್ಲಿ ಸಭೆಯಾಗಲಿಲ್ಲ. ಮತ್ತೆ ಮೊನ್ನೆ 11ನೇ ತಾರೀಖಿಗೆ ಜಲಸಂಪನ್ಮೂಲ ಸಚಿವರ ಹತ್ತಿರ

ಹೋಗಿ ಮನವಿಯೊಂದನ್ನು ಕೊಟ್ಟು ಅವರ ಜೊತೆ ಚರ್ಚೆ ಮಾಡಿ ತಕ್ಷಣವೇ ಸಭೆಯನ್ನು ಕರೆಯಬೇಕೆಂದು ಒತ್ತಾಯ ಮಾಡಿದ್ದೇನೆ, ಆಗಸ್ಟ್ ಮೊದಲನೆಯ ವಾರ ಸಭೆಯನ್ನು ಕರೆಯುತ್ತೇವೆಂದು ಹೇಳಿದ್ದಾರೆ, ಆಗಸ್ಟ್ ಮೊದಲನೇ ವಾರದ ಸಭೆಯಲ್ಲಿ ಅಂತಿಮವಾಗಿರತಕ್ಕ ನಿರ್ಣಯ ಬರುತ್ತದೆಂದು ನಾನು ಅಪೇಕ್ಷಿಸುತ್ತೇನೆ. ಈ ವೇದಿಕೆಯನ್ನು ಉಪಯೋಗ ಮಾಡಿಕೊಂಡು ನಮ್ಮ ಕರ್ನಾಟಕಕ್ಕೆ ಏನು ಇನ್‌ಪ್ರಿನ್ಸಿಪಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ ಅದನ್ನೇನು ಅಬೆಯನ್ಸನಲ್ಲಿ ಕೇಂದ್ರ ಸರ್ಕಾರದವರು ಇಟ್ಟಿದ್ದಾರೆ. ಆ ಒಂದು ಕ್ರಮದಿಂದ ನಮ್ಮ ಕರ್ನಾಟಕಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಆ ಅಬೆಯನ್ಸ್ ಆರ್ಡರ್‌ನ್ನು ವಾಪಸ್ ಪಡೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ತಾವೇನು ಅಬೆಯನ್ಸ್‌ನ ಬಗ್ಗೆ ಹೇಳುತ್ತಿದ್ದೀರಿ ಅದನ್ನು ವಾಪಸ್ ಪಡೆದಿದ್ದಾರೆ, ಕ್ಯಾನ್ಸಲ್ ಮಾಡಿದ್ದಾರೆಂಬ ವರದಿಯನ್ನು ನಾನು ಓದಿದ್ದೇನೆ. ಅದು ನಿಜವೋ ಸುಳ್ಳೋ ಹೇಳಬೇಕು. ಅದರ ಜೊತೆಗೆ, 200 ಟಿ.ಎಂ.ಸಿ ನೀರಿದೆಯೆಂದೇನು ಕೇಂದ್ರ ಸರ್ಕಾರದ ತಜ್ಞರ ಸಮಿತಿ ಹೇಳಿದೆ, ಅದರಲ್ಲಿ ಕರ್ನಾಟಕದ ಪಾಲು ಎಷ್ಟು? ಮತ್ತು ಆ ನೀರನ್ನು ಪಡೆಯಲು ತಾವು ಹೇಗೆ ಪ್ರಯತ್ನ ಮಾಡುತ್ತೀರಿ? ಮತ್ತು 7.56 ಟಿ.ಎಂ.ಸಿ ನೀರನ್ನು ಕುಡಿಯುವ ನೀರಿಗಾಗಿ ಕೊಟ್ಟಿತ್ತು ಎಂದು ಹೇಳಿದ್ದೀರಿ, ಆ ಕಳಸಾ ಮತ್ತು ಬಂಡೂರ ಯೋಜನೆಗಳನ್ನೇನು ಕನ್‌ಸೀವ್ ಮಾಡಿದ್ದೀರಿ ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿಯನ್ನೇನು ಕೊಟ್ಟಿದ್ದೀರಿ, ಇವುಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ನಿಖರವಾಗಿ ಹೇಳಬೇಕು. ನಮ್ಮ ವ್ಯಾಪ್ತಿಯಲ್ಲಿ ಬರುವ ಈ ನದಿಗಳನ್ನು ಇದಕ್ಕಾಗಿ ಕೇಂದ್ರ ಸರ್ಕಾರದ ಅನುಮತಿ ಬೇಕಾಗುತ್ತದೆಯೇ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ನಾನು 1992 ರಿಂದ ಇಲ್ಲಿಯವರೆಗೆ ಸುಮಾರು ಹತ್ತು ವರ್ಷಗಳಿಂದ ಜನಗಳಿಗೆ ಏನಾಗಿದೆಯೆಂದರೆ, ಕಾಲಕಾಲಕ್ಕೆ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟಂಥ ಮಂತ್ರಿಗಳು ಗೋವಾಕ್ಕೆ ಹೊಂದಂಥ ಸಂದರ್ಭದಲ್ಲಿ ಅಲ್ಲಿ ಮಜವಾಗಿ ಇದ್ದು ಬರಬೇಕೆಂದು ಹೋಗಿದ್ದರು ಎಂಬ ಭಾವನೆ ಬರುತ್ತಿದೆ, ಹತ್ತು ಟಿ.ಎಂ.ಸಿ. ನೀರು ಮಹಾದಾಯಿ, ಮಲಪ್ರಭಾದಲ್ಲಿ ಬರುತ್ತಿಲ್ಲ. ಇವರು ಕುಡಿಯಲ್ಲೂ ನೀರು ಇಲ್ಲದಂಥ ಪರಿಸ್ಥಿತಿ ಬರುತ್ತಿದೆ, ಅದಕ್ಕೆ ಏನು ಮಾಡುತ್ತೀರಿ ಎಂದು ಸ್ಪಷ್ಟವಾಗಿ ಹೇಳಬೇಕು, ಯಾವಾಗ ಪ್ರಾರಂಭಮಾಡುತ್ತೀರೆಂದು ಬಹಳ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಯಾವಗಲ್‌ರವರು ಏನು ಅಭಿಪ್ರಾಯ ಪಡುತ್ತಿದ್ದಾರೋ ಅಥವಾ ಜನರ ಭಾವನೆ ಆ ರೀತಿ ಇದೆ ಎನ್ನುವಂತಹದ್ದೇನು ವ್ಯಕ್ತ ಮಾಡುತ್ತಿದ್ದಾರೋ ಅದರಲ್ಲಿ ಸಾಕಷ್ಟು ಅರ್ಥ ಇದೆ. ಕಾರಣವೇನೆಂದರೆ, 20 ವರ್ಷಗಳಿಂದ ಈ ಯೋಜನೆಯನ್ನು ನಾವು ಪ್ರಾರಂಭ ಮಾಡುವುದಕ್ಕಾಗಿಲ್ಲ. ಇದನ್ನು ಕರ್ನಾಟಕದವರು ನೇರವಾಗಿ ಕೈಗೆತ್ತಿಕೊಳ್ಳಲಿಕ್ಕೆ ಏನು ತೊಂದರೆ ಎಂದರೆ, ಇದು inter-state river ಆಗಿದೆ. ನಮ್ಮ ಪಾಲು ಎಷ್ಟು ಇದೆ ಎಂದು ಅವರು ಕೇಳಿದರು. ನಮ್ಮ ಕ್ಯಾಚ್‌ಮೆಂಟ್‌ನಿಂದ 45 ಟಿ.ಎಂ.ಸಿ. ನೀರು ಈ 200 ಟಿ.ಎಂ.ಸಿ.ಯೊಳಗೆ ಇವತ್ತು ಸೇರುತ್ತದೆ. ಇದರೊಳಗೆ ನನ್ನ ನ್ಯಾಯಯುತವಾಗಿರತಕ್ಕಂಥ ಬೇಡಿಕೆ ಏನೆಂದರೆ, 45 ಟಿ.ಎಂ.ಸಿ. ನೀರು ನನ್ನ ಪಾಲಿಗೆ ಬರಬೇಕು. ಅದರಲ್ಲಿ ನಾನು ಎಷ್ಟು ಬಳಸಿಕೊಳ್ಳುತ್ತೇನೋ, ಎಲ್ಲೆಲ್ಲಿ ಬಳಸಿಕೊಳ್ಳುತ್ತೇನೋ ಎನ್ನುವುದು ನನ್ನ ಹಕ್ಕು ಆಗಬೇಕು. ಆದ್ದರಿಂದ 45 ಟಿ.ಎಂ.ಸಿ. ನಮ್ಮ ಕರ್ನಾಟಕದ ಹಕ್ಕು ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ.

ತಾವು ಹತ್ತು ಹಲವು ಸಂದರ್ಭದಲ್ಲಿ ನನಗೆ ಒತ್ತಾಯ ಮಾಡಿದ್ದೀರಿ, ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಬೇರೆ ಯಾವುದಾದರೂ ಒಂದು ಅವಕಾಶವನ್ನು ಉಪಯೋಗ ಮಾಡಿಕೊಂಡು, ನಾವೇ ಏಕೆ ಇದನ್ನು ಕೈಗೆತ್ತಿಕೊಳ್ಳಲಿಕ್ಕೆ ಬರುವುದಿಲ್ಲ ಎನ್ನುವುದನ್ನು ಚರ್ಚೆ ಮಾಡಿದ್ದೀರಿ. ನಮ್ಮ ಕಾನೂನು ಪಂಡಿತರನ್ನೂ ಸಹಿತ ಸಭೆಯೊಂದಕ್ಕೆ ಕರೆದಾಗ ಸನ್ಮಾನ್ಯ ಯಾವಗಲ್‌ರವರು ಅದರ ಬಗ್ಗೆ ವಾದ ವಿವಾದಗಳನ್ನು ಮಾಡಿದರು. ಏನಾದರೂ ಮಾಡಿ without permission of Goa,we will start ಎನ್ನುವಂತಹ ಒತ್ತಡ ರೈತರದು ಆಗಿದೆ ಎನ್ನುವುದನ್ನು ಮನವರಿಕೆ ಮಾಡಿಕೊಡತಕ್ಕಂಥ ಪ್ರಯತ್ನ ಮಾಡಿದರು. ಅವೆಲ್ಲವುಗಳನ್ನೂ ಸಹಿತ ನಾವು ಗಮನದಲ್ಲಿರಿಸಿಕೊಂಡಿದ್ದೇವೆ. ಅದು interstate river ಆಗಿರುವುದರಿಂದ ನಾವು ನಮ್ಮದೇ ಆಗಿರತಕ್ಕಂಥ ರೀತಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡುವುದು ತೊಂದರೆಯಾದೀತು. ಒಂದು ವೇಳೆ ಅದನ್ನು ಪ್ರಾರಂಭ ಮಾಡಿದ್ದೇ ಆದರೆ, ಅದು ನಿಲ್ಲತಕ್ಕಂಥದ್ದು ಆಗಬಾರದು ಎನ್ನುವಂತಹ ದೃಷ್ಟಿಯಿಂದ ಎಲ್ಲಾ ಅಂಶಗಳನ್ನೂ ಸಮಗ್ರವಾಗಿ ನೋಡುತ್ತಿದ್ದೇವೆ. ತಮಗೂ ಗೊತ್ತಿದೆ, ಇವತ್ತು ರಾಷ್ಟ್ರದಲ್ಲಿ ಒಂದು ರೀತಿ ರಾಷ್ಟ್ರದ ನದಿಗಳ ಜೋಡಣೆ ಮಾಡಬೇಕು ಎನ್ನುವುದರ ಬಗ್ಗೆ ಚಿಂತನೆ ನಡೆದಿದೆ. Inter linking of rivers ಗಂಗಾದಿಂದ ಕಾವೇರಿವರೆಗೆ ಜೋಡಣೆ ಮಾಡಬೇಕು ಎಂದು ಮಾತನಾಡತಕ್ಕಂಥ ಈ ಸಂದರ್ಭದಲ್ಲಿ, ಎಲ್ಲಿ ನೀರು ಕ್ರಿಮಿನಲ್ ವೇಸ್ಟಾಗಿ ಇವತ್ತು ಹೋಗುತ್ತಿದೆಯೋ ಅದಕ್ಕೆ ಪರವಾನಗಿ ಕೊಡುವುದಕ್ಕೆ ತಡ ಮಾಡಬೇಡಿ ಎಂದು ಕೇಂದ್ರ ಸರ್ಕಾರಕ್ಕೆ ನಾವು ಒತ್ತಾಯ ಮಾಡಿದ್ದೇವೆ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್ ಮತ್ತು ಎಸ್.ಎಸ್. ಪಾಟೀಲ್‌ರವರು ಮಾತ್ರ ಉಪ ಪ್ರಶ್ನೆಗಳನ್ನು ಕೇಳಲಿ. ಉಳಿದವರಿಗೆ ನಾನು ಅವಕಾಶ ಮಾಡಿಕೊಡುವುದಿಲ್ಲ. ಈಗಾಗಲೇ ಸಮಯವಾಗಿದೆ. ಈಗಾಗಲೇ ಪ್ರಶ್ನೋತ್ತರದ ವೇಳೆ ಮುಗಿದಿದೆ. ಆದರೂ ಇನ್ನೂ ಐದು ಪ್ರಶ್ನೆಗಳು ಇಂದು ಬಾಕಿ ಇವೆ. ನಾನೇನು ಮಾಡಲಿ ಎಂಬುದನ್ನು ನೀವೇ ಹೇಳಿ. ಸಂಬಂಧಪಟ್ಟಿರುವವರೇ ಬೇಕಾದಷ್ಟು ಉಪ ಪ್ರಶ್ನೆಗಳನ್ನು ಅಥವಾ ಸ್ಪಷ್ಟೀಕರಣಗಳನ್ನು ಕೇಳಬಹುದು. ಹೀಗಿರುವಾಗ ಬೇರೆಯವರಿಗೆ ಹೇಗೆ ನಾನು ಅವಕಾಶ ಕೊಡಲಿ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಹದಾಯಿ ಮತ್ತು ಮಲಪ್ರಭಾ ನದಿಗಳ ಜೋಡಣೆ ಆಗಬೇಕೆನ್ನುವುದರ ಬಗ್ಗೆ ಎರಡನೇ ಮಾತಿಲ್ಲ. ಏಕೆಂದರೆ, ಮಲಪ್ರಭಾ ನದಿಗೆ ಸವದತ್ತಿ ಹತ್ತಿರ ನವಿಲುತೀರ್ಥದಲ್ಲಿ ಡ್ಯಾಮ್ ಏನು ಕಟ್ಟಿದ್ದೀರಿ, ಅದರಲ್ಲಿ 47 ಟಿ.ಎಂ.ಸಿ ನೀರು ಸಂಗ್ರಹ ಆಗಬೇಕಾಗಿತ್ತು. ಆದರೆ ಇಲ್ಲಿಯವರೆಗೂ ಒಂದು ಸಲವೂ ಕೂಡ ಅಲ್ಲಿ ಅಷ್ಟೊಂದು ನೀರು ಸಂಗ್ರಹವಾಗಿಲ್ಲ.

ಶ್ರೀ ಬಿ.ಆರ್. ಯಾವಗಲ್ : ಅಲ್ಲಿ ಅಷ್ಟು ನೀರೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹೌದು ಅಲ್ಲಿ ನೀರೇ ಇಲ್ಲ. ಅಲ್ಲಿ ಬಹುಶಃ 1 ಅಥವಾ 3 ಟಿ.ಎಂ.ಸಿ ನೀರು ಇರಬಹುದಷ್ಟೇ.

ಶ್ರೀ ಬಿ.ಆರ್. ಯಾವಗಲ್ : ಅಲ್ಲಿ ನೀರು ಇಲ್ಲದಿರುವುದಷ್ಟೇ ಅಲ್ಲ. ಅಸೆಸ್ ಮಾಡಿದಷ್ಟು ನೀರು ಯಾವತ್ತಿಗೂ ಅಲ್ಲಿ ಬಂದಿಲ್ಲ. ಆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಯಾವತ್ತೂ ಮಳೆ ಹೆಚ್ಚಾಗಿ ಬಂದೇ ಇಲ್ಲ.

ಜಗದೀಶ್ ಶೆಟ್ಟರ್ : ಹೌದು, ಅಲ್ಲಿ ಅಷ್ಟೊಂದು ಮಳೆ ಯಾವಾಗಲೂ ಕೂಡ ಬಂದೇ ಇಲ್ಲ. ಅದರಿಂದ ಏನೊಂದು ಪ್ರದೇಶ ನೀರಾವರಿಗೆ ಒಳಪಡಬೇಕಾಗಿತ್ತೋ ಅದು ಆಗಲಿಲ್ಲ. ಹೀಗಾಗಿ

ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಣೆ ಮಾಡುವಂತಹ ಯೋಜನೆಯನ್ನು ನಮ್ಮ ರಾಜ್ಯದ ಹಿತಾಸಕ್ತಿ ಸಲುವಾಗಿ ಮತ್ತು ಆ ಭಾಗದ ರೈತರ ಸಲುವಾಗಿ ಜಾರಿಗೊಳಿಸಬೇಕು. ಅದಕ್ಕಾಗಿ ರಾಜ್ಯ ಸರ್ಕಾರ ಏನೊಂದು ಪ್ರಯತ್ನಗಳನ್ನು ನಡೆಸುತ್ತಿದೆಯೋ ಅದಕ್ಕೆ ಎಲ್ಲರೂ ಕೂಡಿ ಕೈಜೋಡಿಸಿಕೊಂಡು ಆ ದಿಸೆಯಲ್ಲಿ ಇನ್ನಷ್ಟು ಪ್ರಯತ್ನ ನಡೆಸೋಣ. ಮಹದಾಯಿ ಯೋಜನೆ ಬಗ್ಗೆ ಪತ್ರ ವ್ಯವಹಾರ 1988 ರಿಂದಲೂ ಪ್ರಾರಂಭವಾಗಿದೆ. ಆಗ ಯಾವ್ಯಾವ ಸರ್ಕಾರಗಳು ಇಲ್ಲಿದ್ದವೋ ಮತ್ತು ಕೇಂದ್ರದಲ್ಲಿ ಇದ್ದವೋ, ಆಗಿನಿಂದಲೂ ಈ ಯೋಜನೆಗಳು ಪ್ರಾರಂಭವಾಗಿವೆ. 2001ರಲ್ಲಿ ಕೇಂದ್ರದ ಪರಿಸರ ಮತ್ತು ಅರಣ್ಯ ಇಲಾಖೆ ಈ ಯೋಜನೆಗೆ ಅನುಮತಿ ನೀಡಬೇಕೆಂದು ರಾಜ್ಯ ಸರ್ಕಾರ ಪತ್ರವೊಂದನ್ನು ಕಳುಹಿಸಿತ್ತು. ಅದು ಇನ್ನೂ ಪೆಂಡಿಂಗ್‌ನಲ್ಲಿದೆ ಎಂದು ನನಗೆ ತಿಳಿದು ಬಂದಿದೆ. ಅದು ಏನಾಯಿತು? ಆ ದಿಸೆಯಲ್ಲಿ ಮತ್ತೆ ನಿಮ್ಮ ಕಡೆಯಿಂದ ಪತ್ರ ವ್ಯವಹಾರಗಳೇನಾದರೂ ಆಗಿವೆಯೇ? ಹೇಗೆ? ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಆ ಬಗ್ಗೆ ನಮಗೇನೂ ಗೊತ್ತಾಗಿಲ್ಲ. ಹಿಂದೆ ಜನತಾದಳ ಸರ್ಕಾರ ಇದ್ದಾಗ ಅಥವಾ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಆಗಿನ ಗೋವಾದ ಮುಖ್ಯಮಂತ್ರಿಗಳೊಂದಿಗೆ ಆ ಬಗ್ಗೆ ಮಾತುಕತೆಗಳು ಆಗಿರಬಹುದು. ಆದರೆ ಮಾನ್ಯ ಮನೋಹರ್ ಪಣಿಕಲ್‌ರವರು ಗೋವಾದ ಮುಖ್ಯಮಂತ್ರಿಗಳಾದ ಮೇಲೆ ನಮ್ಮ ಮುಖ್ಯಮಂತ್ರಿಗಳು ಇಲ್ಲಿ ಅವರು ಬೆಂಗಳೂರಿಗೆ ಬಂದಾಗ, ಬೇರೆ ಬೇರೆ ವಿಷಯಗಳನ್ನು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಈ ಬಗ್ಗೆಯೂ ಚರ್ಚೆ ಮಾಡಿರಬಹುದು. ಆದರೆ ವಿಶೇಷವಾಗಿ ಇದಕ್ಕಾಗಿಯೇ ಏನಾದರೂ ಒಂದು ಮಾತುಕತೆ ಆಗಬೇಕಾಗಿತ್ತು ಎನ್ನುವಂತಹದ್ದು ನನ್ನದೊಂದು ಕಳಕಳಿಯಾಗಿದೆ. ಆ ಮುಖ್ಯಮಂತ್ರಿಗಳೊಂದಿಗೆ ನಮ್ಮ ಮುಖ್ಯಮಂತ್ರಿಗಳು ಮಾತುಕತೆ ನಡೆಸಬೇಕಾಗಿತ್ತು. ಆದರೆ ಅದು ಆಗಿಲ್ಲ. ಮುಂದೆ ಅವರು ಕ್ಲಿಯರೆನ್ಸ್ ಕೊಟ್ಟರು, ಆಮೇಲೆ ನೀವು ಸ್ಟಾರ್ಟ್ ಮಾಡುತ್ತೇವೆ ಎಂದು ಅಂದಿರಿ, ಆಮೇಲೆ ಮತ್ತೆ abeyance ನಲ್ಲಿ ಇಟ್ಟರು ಎನ್ನುವಂತಾದ್ದು ಮುಂದೆ further ಆಗಿರುವಂತಹ ಬೆಳವಣಿಗೆಗಳಾಗಿವೆ. ಆ ರಾಜ್ಯದಲ್ಲಿ ಏನೋ emotional issues create ಆಗಿರಬಹುದು. ಅಲ್ಲಿ ಮಾಂಡೋವಿ ಬಚಾವ್ ಎನ್ನುವಂತಹ ಚಳುವಳಿಯೊಂದನ್ನು ಅಲ್ಲಿಯ ರಾಜಕೀಯ ಪಕ್ಷದವರೊಬ್ಬರು ಮಾಡುತ್ತಿದ್ದಾರೆ ಎಂದು ನಾನು ಕೇಳಿದ್ದೇನೆ. ಹೀಗಾಗಿ ಯಾವ ಯಾವುದೋ ಒತ್ತಡಗಳು ಕಾರಣ ಆಗಿರಬಹುದು. ಅವರನ್ನು ನಾವು ಈಗ convince ಮಾಡಿದರೆ ಈ ಯೋಜನೆ ಸಾಧ್ಯವಾಗಬಹುದು. ಯಾವ ರೀತಿಯಾಗಿ ಇವತ್ತು ಮಾನ್ಯ ಪ್ರಧಾನ ಮಂತ್ರಿಗಳು ಯೋಜನೆಯನ್ನೇ ರೂಪಿಸಿ, ಗಂಗಾ–ಕಾವೇರಿ ನದಿಗಳನ್ನು ಜೋಡಣೆ ಮಾಡತಕ್ಕಂಥ ಸಂದರ್ಭದಲ್ಲಿ ಬಹುಶಃ ಈ ಬಗ್ಗೆ ನಾವೆಲ್ಲಾ ಆವರನ್ನು convince ಮಾಡಿದರೆ, ಬಹುಶಃ ನಾವು ಕೇಂದ್ರ ಸರ್ಕಾರವನ್ನು ಈ ಬಗ್ಗೆ ಮನವೊಲಿಸಲಿಕ್ಕೆ ತೊಂದರೆಯೇನೂ ಆಗಲಾರದು. ನಾವು ಚಿತ್ರಾವತಿ ನದಿ ಬಗ್ಗೆ ಅಥವಾ ಮತ್ತೊಂದು ನದಿ ಬಗ್ಗೆ, ಹೀಗೆ ಬೇರೆ ಬೇರೆ ವಿಷಯಗಳ ಬಗ್ಗೆ ನಾವು ಯಾವ ರೀತಿಯಾಗಿ all party delegation ಹೋಗಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಡಿಯಾಗುತ್ತೇವೆಯೋ, ಅದೇ ರೀತಿಯಲ್ಲಿ ಇವತ್ತು ಕೇಂದ್ರದಿಂದ ಕ್ಲಿಯರೆನ್ಸ್ ಬೇಕಾದರೆ ನಾವೆಲ್ಲರೂ ಕೂಡಿ all party delegation ಹೋಗೋಣ. ನಾವು ಈ ರೀತಿ ಹೋಗಿ ಕೇಂದ್ರವನ್ನು convince ಮಾಡಬಹುದಾದಂತಹ ವಿಚಾರ ಇದಾಗಿದೆ. ಇವತ್ತು ಆ ಭಾಗದ, ನವಲಗುಂದದ ಭಾಗ ಇರಬಹುದು, ಬಾದಾಮಿ ಕಡೆಗೆ ಇರಬಹುದು, ಬಾಗಲಕೋಟೆ ಜಿಲ್ಲೆ ಇರಬಹುದು ಅಥವಾ ಬೆಳಗಾಂ ಜಿಲ್ಲೆಯ

ಕೆಲವೊಂದು ಪೋರ್ಷನ್ ಇರಬಹುದು, ಅಂತಹ ಕಡೆಗಳಿಗೆ ಈ ಯೋಜನೆಯಿಂದ ಅನುಕೂಲವಾಗುತ್ತದೆ. ಮಾನ್ಯ ಸಚಿವರು ಸ್ಟೇಟ್‌ಮೆಂಟ್‌ವೊಂದನ್ನು ಕೊಟ್ಟಿದ್ದರು. ಈಗ ಮಾನ್ಯ ಯಾವಗಲ್‌ರವರು, ಇದು ನಮ್ಮ jurisdictionನಲ್ಲಿ ಬರುತ್ತಿರುವುದರಿಂದ, ಯಾವುದೇ ಪರ್ಮಿಷನ್ ಇಲ್ಲದಿದ್ದರೂ, ಇದನ್ನು ಏಕೆ ಕೈಗೆತ್ತಿಕೊಳ್ಳಬಹುದು ಎಂದು ಕೇಳಿದರು. ಮಾನ್ಯ ಸಚಿವರೂ ಕೂಡ ಹಿಂದೊಮ್ಮೆ ಇದು ನಮ್ಮ jurisdiction ನಲ್ಲಿ ಇರುವುದರಿಂದ, ಇದಕ್ಕೆ ಅನುಮತಿ ಇಲ್ಲದೆ ನಾವೇ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದ್ದನ್ನು ನಾನು ನೋಡಿದ್ದೇನೆ. ಆದರೆ ಈಗ ಮಾನ್ಯ ಸಚಿವರು ಅದಕ್ಕೆ ವ್ಯತಿರಿಕ್ತವಾದ ಮಾತನ್ನು ಹೇಳುತ್ತಿದ್ದಾರೆ. ಅನುಮತಿಯ ಅವಶ್ಯಕತೆ ಇಲ್ಲ ಎನ್ನುವುದಾದರೆ, ಕಳಸಾನಾಲ ಮತ್ತು ಬಂಡೂರು ನಾಲದ ಕೆಲಸವನ್ನು ತಾವು ಕೂಡಲೇ ಪ್ರಾರಂಭ ಮಾಡಿ. 2000 ಇಸವಿಯಲ್ಲಿ 44 ಮತ್ತು 49 ಕೋಟಿ ರೂಪಾಯಿಗಳ ಎರಡು ಯೋಜನೆಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದೀರಿ. ಅದನ್ನು ನೀವು ಪ್ರಾರಂಭ ಮಾಡಿಬಿಡಬೇಕಾಗಿತ್ತು. ಈಗಲಾದರೂ ಅದನ್ನು ಮಾಡಿಬಿಡಿ. ಆಂಧ್ರದವರು ಪರ್ಮಿಷನ್ ಇಲ್ಲದೆ ಎಷ್ಟೆಷ್ಟೋ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವಾಗ ನಾವೂ ಏಕೆ ಮಾಡಬಾರದು? ಆದ್ದರಿಂದ ಆ ಕೆಲಸವನ್ನು ನೀವೂ ಸಹ ಮಾಡಿ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ಇದರ ಕೆಲಸವನ್ನು ಯಾವಾಗ ಶುರು ಮಾಡುತ್ತಾರೆ ಎಂಬ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಜಗದೀಶ್ ಶೆಟ್ಟರ್‌ರವರು ಕೆಲವಾರು ಸರಿಯಾದ ಮಾತುಗಳನ್ನು ಪ್ರಸ್ತಾಪ ಮಾಡಿದರು. ಮೊದಲನೆಯದಾಗಿ, ನಮ್ಮ ಕರ್ನಾಟಕದ ಯೋಜನೆಗಳಾಗಿರತಕ್ಕಂಥ ಕಳಸಾನಾಲಾ ಮತ್ತು ಬಂಡೂರು ನಾಲಾ ಪೂರ್ಣವಾಗಿ ನಮ್ಮ ಯೋಜನೆಗಳೇ ಆಗಿವೆ. ಇವು ಬೇರೆಯವರ ಯೋಜನೆಗಳಲ್ಲ. ಮಹದಾಯಿಯಲ್ಲಿ ನಮ್ಮ ಪಾಲಿನ ನೀರು ಏನಿದೆಯೋ ಅದು ನಮ್ಮ ಹಕ್ಕು ಆಗಿದೆ. ಆದರೆ ಇರತಕ್ಕಂಥ ನಿಯಮಗಳ ಹಿನ್ನೆಲೆಯಲ್ಲಿ, ಅಂತರ ರಾಜ್ಯ ನದಿಯಾಗಿರುವುದರಿಂದ ಇನ್ನೊಂದು ರಾಜ್ಯದ consent ಬೇಕಾಗಿತ್ತು ಇಲ್ಲವೇ ಕೇಂದ್ರದ ಪರವಾನಗಿ ಬೇಕಾಗಿತ್ತು. ಮಾನ್ಯ ಪಣಿಕಲ್‌ರಲ್ ಜೊತೆಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಇದುವರೆಗೂ ಕೂಡ ಮಾತನಾಡಿರಲಿಕ್ಕಿಲ್ಲ ಎಂಬ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಮಾನ್ಯ ರಾಮಕೃಷ್ಣ ಹೆಗಡೆಯವರು, ಮಾನ್ಯ ಬೊಮ್ಮಾಯಿಯವರು ಮತ್ತು ಮಾನ್ಯ ಜೆ.ಹೆಚ್. ಪಟೇಲ್‌ರವರು ಮಾತನಾಡಿದ್ದೆಲ್ಲಾ ಆಯಿತು. ಸನ್ಮಾನ್ಯ ಪಣೀಕಲ್‌ರವರ ಜೊತೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಸುಮಾರು ಅರ್ಧ ಗಂಟೆಗಳ ಕಾಲ ಮಾತನಾಡಿದರು. ಅಷ್ಟೇ ಅಲ್ಲ, ಏನು ಇದರಿಂದ ನಿಮಗೆ ಲಾಭ? ಏಕೆ ನೀವು ಅಡೆ-ತಡೆ ಮಾಡುತ್ತೀರಿ? ನೀವು ಮಹದಾಯಿಯಲ್ಲಿ ನಮ್ಮ ಪಾಲು ಏನು ಬರುತ್ತದೋ ಅದನ್ನು ಕೊಡಿ, ಐ.ಟಿ. ಯೊಳಗೆ ನಿಮಗೆ ಏನೇನೆಲ್ಲಾ assistance ನಿಮಗೆ ಬೇಕೋ, ಅದನ್ನೆಲ್ಲಾ ನಾವು ನಿಮಗೆ ಕೊಡುತ್ತೇವೆ ಎನ್ನುವಂತಹ ಮಾತನ್ನು ಸನ್ಮಾನ್ಯ ನಮ್ಮ ಮುಖ್ಯಮಂತ್ರಿಗಳು ಅವರಿಗೆ ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳುವುದೇನೆಂದರೆ, ಇದೇ ವಿಷಯದ ಸಲುವಾಗಿ ನೀವೊಂದು Special Meeting ಮಾಡಬೇಕಾಗಿತ್ತು. ಐ.ಟಿ. ಸಲುವಾಗಿ ಗೋವಾದ

ಮುಖ್ಯಮಂತ್ರಿಗಳು ಇಲ್ಲಿಗೆ ಬಂದಾಗ ನಮ್ಮ ಮುಖ್ಯಮಂತ್ರಿಗಳು ಆ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಮಾತನಾಡುವುದು ಬೇರೆ, ವಿಶೇಷವಾಗಿ ಮಹದಾಯಿ ಯೋಜನೆ ಬಗ್ಗೆಯೇ ಅವರ ಅಧಿಕಾರಿಗಳು ಮತ್ತು ನಿಮ್ಮ ಅಧಿಕಾರಿಗಳನ್ನು ಕೂರಿಸಿಕೊಂಡು ಮಾತನಾಡುವುದೇ ಬೇರೆ. ಆ ರೀತಿ ಆಗಿಲ್ಲ ಎನ್ನುವಂತಹ ವಾದ ನನ್ನದಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದು ತಮ್ಮ ಗಮನಕ್ಕೆ ಬಂದಿರಬೇಕು. ನಾನು ಗೋವಾ ಮುಖ್ಯಮಂತ್ರಿಗಳ ಭೇಟಿಗೆ ಹೋಗಿದ್ದೆ. ಅಲ್ಲೊಂದು ಮೀಟಿಂಗ್ ಆಯಿತು. ಅದರ ನಂತರ ಗೋವಾ ಮುಖ್ಯಮಂತ್ರಿಗಳು ಕರ್ನಾಟಕಕ್ಕೆ ಬಂದಾಗ ಈ ವಿಚಾರವಾಗಿ ಚರ್ಚೆಯಾಯಿತು. ನಮಗೆ in principle clearance ಸಿಕ್ಕಿತು. ಗೋವಾದಲ್ಲಿ ಚುನಾವಣೆಗಳಾದವು. ಚುನಾವಣೆಗಳಾದ ನಂತರ ಕೇಂದ್ರ ಸರ್ಕಾರದವರ ಮೇಲೆ ಒತ್ತಡ ತಂದು, ಆ in principle clearance ಅನ್ನು ಅವರು abeyance ನಲ್ಲಿ ಇಡಿಸಿದರು. ನಂತರ ಮತ್ತೆ ಜಲ ಸಮಪನ್ಮೂಲ ಇಲಾಖೆ ಸಚಿವರನ್ನು ಭೇಟಿಯಾಗಿ ಈ ಬಗ್ಗೆ ಒತ್ತಾಯ ಮಾಡಿದೆವು. ಸನ್ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳಿಗೆ ಆ ವಿಚಾರವಾಗಿ ಪತ್ರ ಬರೆದರು. ಗೋವಾ ಸರ್ಕಾರದವರು ಏತನ್ಮಧ್ಯೆ ಟ್ರಿಬ್ಯೂನಲ್ ರಚನೆ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ದೂರು ಕೊಟ್ಟರು. ನಾವು ಟ್ರಿಬ್ಯೂನಲ್ ರಚನೆ ಮಾಡುವುದಕ್ಕೆ ಬೇಡ ಎಂದೇನೂ ಹೇಳಲಿಲ್ಲ. ಟ್ರಿಬ್ಯೂನಲ್ ರಚನೆ ಮಾಡಿ, ಇದರಿಂದ ನಮ್ಮ ಪಾಲಿನ 45 ಟಿ.ಎಂ.ಸಿ. ನೀರು ನಮಗೆ ಬರುತ್ತದೆ. ಈ ದಿಸೆಯಲ್ಲಿ ತಡ ಮಾಡಬೇಡಿ ಎಂದು ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆವು. ಗೋವಾದವರು ಟ್ರಿಬ್ಯೂನಲ್ ರಚನೆ ಮಾಡಿ ಎಂದು ಕೇಳಿದ್ದಾರೆ. ನಾವೂ ಕೂಡ ಟ್ರಿಬ್ಯೂನಲ್ ರಚನೆ ಮಾಡಿ ಎಂದು ಹೇಳಿದ್ದೇವೆ. Goa Government has made a complaint to constitute a Tribunal. ನಾವೂ ಕೂಡ ಟ್ರಿಬ್ಯೂನಲ್ ಮಾಡಿ ಎಂದೇ ಹೇಳುತ್ತಿದ್ದೇವೆ. ಆದರೆ ಏತನ್ಮಧ್ಯೆ ನಮಗೇನು 7.56 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡುವುದಕ್ಕೆ clearance ಕೊಟ್ಟಿದ್ದೀರೋ, ಆ clearance ಅನ್ನು ನೀವು ಮುಂದುವರೆಸಿ, ಮುಂದೆ ನಮಗೇನು ಅಲೋಕೇಷನ್ ಆಗುತ್ತದೋ ಅದರೊಳಗೆ ಅದನ್ನು proportionate ಆಗಿ deduct ಮಾಡಿ ಎನ್ನುವುದಕ್ಕೂ ಕೂಡ ನಾವು ಒಪ್ಪಿಕೊಂಡಿದ್ದೇವೆ. ಕರ್ನಾಟಕದ stand ಏನಿದೆ, ಅದು ಎಷ್ಟು reasonable ಆಗಿದೆ ಎಂದರೆ, ಕೇಂದ್ರ ಸರ್ಕಾರದ ಅಧಿಕಾರಿಗಳು ಈ ನಮ್ಮ ವಾದವನ್ನು, ವಿನಂತಿಯನ್ನು ಕೇಳುವಾಗ, ಇನ್ನೂ ನಾವು ಇದಕ್ಕೆ ಪರವಾನಿಗೆಯನ್ನು ಕೊಟ್ಟಿಲ್ಲವಲ್ಲಾ ಎಂದು ಮುಖ ಕೆಳಗೆ ಮಾಡುತ್ತಾರೆ.

12.10 ಪಿ.ಎಂ.

ಕೇವಲ ರಾಜಕೀಯ ಕಾರಣಕ್ಕಾಗಿ ಮಾತ್ರ ನಮ್ಮ ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ಇವತ್ತು ತಡೆ ಹಿಡಿದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ರಾಜಕಾರಣ ಮಾಡುವುದು ಬೇಕಾಗಿಲ್ಲ. ಇದು ಬಂದರೆ ನಾವೂ ರಾಜಕೀಯ ವಿಷಯದ ಬಗ್ಗೆ ಮಾತನಾಡಬೇಕಾಗುತ್ತದೆ. ಗೋವಾದಲ್ಲಿ ಏನು ನಡೆಯುತ್ತಿದೆ ಎಂದು ಹೇಳಬೇಕಾಗುತ್ತದೆ. ಬೇರೆ ಬೇರೆ ವಿಷಯಗಳಲ್ಲಿ ಕಾವೇರಿ ವಿಷಯ ಇರಬಹುದು, ಕೃಷ್ಣ ವಿಷಯ ಇರಬಹುದು, ಕೇಂದ್ರ ಸರ್ಕಾರ ನಿಷ್ಪಕ್ಷಪಾತವಾಗಿ ನಡೆದಿದೆ ಎಂದು ನಿಮಗೆ ಗೊತ್ತಿದೆ. ನೀವು ರಾಜಕೀಯ ವಿಷಯ ತೆಗೆದುಕೊಂಡು ಬಂದರೆ ನಾವೂ ರಾಜಕೀಯ ಮಾತನಾಡಬೇಕಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ನೀವು ಪ್ರಸ್ತಾಪ ಮಾಡಿದ್ದೀರಿ, ನಾನೂ ಅದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಗೋವಾದಲ್ಲಿ ಜನ ಎಮೋಷನಲ್ ಆದರು ಎಂದು ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ಅಬೆಯನ್ಸ್‌ನಲ್ಲಿ ಇಟ್ಟಿರಬಹುದು. ನಮ್ಮಲ್ಲಿ ಜನ ಎಮೋಚನಲ್ ಆಗುವುದಕ್ಕೆ ಬರುವುದಿಲ್ಲ? 45 ಟಿಎಮ್‌ಸಿಯಲ್ಲಿ ಒಂದು ಟಿಎಮ್‌ಸಿ ನೀರನ್ನೂ ಬಳಕೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಗೋವಾದಲ್ಲಿ ಅಷ್ಟೇ ಜನ ಎಮೋಷನಲ್ ಆಗಿದ್ದಾರಾ?

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಕಾಂಗ್ರೆಸ್‌ನವರು ಮಾಂಡೋವಿ ಬಚಾವ್ ಎಂದು ಚಳುವಳಿ ಮಾಡುತ್ತಿದ್ದಾರೆ. ರಾಜಕೀಯ ಮಾಡಬೇಕಾದರೆ ಬೇಕಾದಷ್ಟು ಮಾಡಬಹುದು.

ಶ್ರೀ ಹೆಚ್.ಕೆ. ಪಾಟೀಲ್ : ಗೋವಾದವರು ಮಾಂಡೋವಿ ಬಚಾವ್ ಮಾಡುತ್ತಿದ್ದರೆ, ನಾವು ಕರ್ನಾಟಕದವರು ಏನು ಕೈ ಕಟ್ಟಿ ಕುಳಿತುಕೊಳ್ಳುವುದಕ್ಕಾಗುತ್ತಾ? ಮಹಾದಾಯಿ ನೀರಿನಲ್ಲಿ ನಮ್ಮ ಹಕ್ಕು ಏನಿದೆ ಅದನ್ನು ನಾವು ಪಡೆಯಬೇಕಾಗುತ್ತದೆ.

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಬೇರೆ ಯಾರು ಮಾತನಾಡಿದರೂ ಬರೆದುಕೊಳ್ಳಬೇಡಿ.

ಶ್ರೀ ಹೆಚ್.ಕೆ. ಪಾಟೀಲ್ : ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದರ ಸಲುವಾಗಿ ಈಗಾಗಲೇ ನಾನು ಜಲಸಂಪನ್ಮೂಲ ಸಚಿವರು ಅಲ್ಲದೆ ಇಂಟರ್ ಲಿಂಕಿಂಗ್ ರಿವರ್ಸ್ ಬಗ್ಗೆ ಟಾಸ್ಕ್‌ಫೋರ್ಸ್ ಏನು ನೇಮಕ ಮಾಡಿದ್ದಾರೆ. ಅದರ ಅಧ್ಯಕ್ಷರಾದ ಸನ್ಮಾನ್ಯ ಸುರೇಶ್ ಪ್ರಭುರವರಿಗೆ ಭೇಟಿಯಾಗಿ ನಮ್ಮ ರಾಷ್ಟ್ರೀಯ ಜಲ ಸಂಪನ್ಮೂಲ ಹೇಗೆ ಇವತ್ತು ವೇಸ್ಟ್ ಆಗುತ್ತಿದೆ, ಹಾನಿಯಾಗುತ್ತಿದೆ ಎನ್ನುವುದನ್ನು ಮನವರಿಕೆ ಮಾಡಿ ಕೊಟ್ಟಿದ್ದೇವೆ. ನಾನು ಈ ವೇದಿಕೆಯನ್ನು ಉಪಯೋಗಿಸಿಕೊಂಡು ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ಅಬೆಯನ್ಸ್ ಆರ್ಡರ್ ಏನು ಮಾಡಿದ್ದಾರೆ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಯಾವಗಲ್‌ರವರು ಹೇಳಿದ ಹಾಗೆ ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ಯಾವುದೇ ಕಾರಣಕ್ಕೂ ಕ್ಯಾನ್ಸಲ್ ಮಾಡಿಲ್ಲ ಎನ್ನುವುದನ್ನು ಅವರ ಗಮನಕ್ಕೆ ತಂದು, ಆಗಸ್ಟ್‌ನಲ್ಲಿ ಆಗುವ ಸಭೆ ಆಗುವವರೆಗೆ ನಾವು ಕಾಯುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಬೇರೆ ಬೇರೆ ವಿಷಯಗಳಲ್ಲಿ ಆಲ್ ಪಾರ್ಟಿ ಡೆಲಿಗೇಷನ್ ಹೋಗುತ್ತಾರೆ. ಬಹಳ ಮಹತ್ವವಾದ ಯೋಜನೆ ಇರುವುದರಿಂದ ಮುಖ್ಯ ಮಂತ್ರಿಗಳು ಆಲ್ ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಪ್ರಧಾನ ಮಂತ್ರಿ ಬಳಿ ಹೋಗಲಿ ನಾವೂ ಕೂಡ ತಯಾರಿದ್ದೇವೆ. ಕನ್‌ವಿನ್ಸ್ ಮಾಡೋಣ. ರಾಜ್ಯದ ಹಿತಾಸಕ್ತಿ ಸಲುವಾಗಿ ಈ ಕೆಲಸ ಮಾಡಲಿ.

(At this stage Hon'ble Member Shivananda Patil tried to intervene)

Mr. Speaker : You please dont talk in the middle. You must please listen to me. Don't take down. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇವರು ಮಧ್ಯೆ ಎದ್ದು ಮಾತನಾಡುತ್ತಿದ್ದಾರೆ. ಬೇರೆಯವರು ಮಾತನಾಡಿದರೆ ಬರೆದುಕೊಳ್ಳಬೇಡಿ.

ಶ್ರೀ ಜಗದೀಶ್ ಶೆಟ್ಟರ್ : ನನ್ನ ಒಂದು ಸೆಜೆಷನ್ ಇದೆ. ಇದರಲ್ಲಿ ರಾಜಕೀಯ ಮಾಡುವುದು ಏನೂ ಇಲ್ಲ. ಅದಕ್ಕಾಗಿ ಬೇರೆ ಬೇರೆ ಸಮಸ್ಯೆಗಳು ಇದ್ದಾಗ ಮುಖ್ಯ ಮಂತ್ರಿಗಳು **ಅಲ್ ಪಾರ್ಟಿ ಡೆಲಿಗೇಷನ್ ತೆಗೆದುಕೊಂಡು ಹೋಗುತ್ತಾರೆ. ನಾವೂ ಕೂಡ ಸಹಕಾರ ಕೊಟ್ಟಿದ್ದೇವೆ.**

ಆ ಸಂದರ್ಭದಲ್ಲಿ ಯಾವ ರೀತಿಯ ಫಲಿತಾಂಶ ಬಂದಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಇದು ಆ ಭಾಗದ ಲಕ್ಷಾಂತರ ರೈತರಿಗೆ ಅನುಕೂಲವಾಗುವಂತಹ ಬಹಳ ಮಹತ್ವದ ಯೋಜನೆ. ಕುಡಿಯುವ ನೀರಿನ ಯೋಜನೆಗೆ ಸಹಕಾರಿಯಾಗುತ್ತದೆ. ಬೇಕಾದರೆ ಪ್ರಧಾನ ಮಂತ್ರಿಗಳ ಬಳಿ ನಾವು ಡೆಲಿಗೇಷನ್ ತೆಗೆದುಕೊಂಡು ಹೋಗೋಣ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಇನ್ಸಿಸಿಯೇಷನ್ ತೆಗೆದುಕೊಂಡರೆ ನಾವೆಲ್ಲರೂ ತಯಾರಿದ್ದೇವೆ. ದಯವಿಟ್ಟು ಬರುವ ವ್ಯವಸ್ಥೆ ಮಾಡಿ

ಶ್ರೀ ಎಸ್.ಎಸ್. ಪಾಟೀಲ್ : ಇದರಲ್ಲಿ ನಮ್ಮ ಕರ್ತವ್ಯ ನಾವು ಮಾಡುತ್ತೇವೆ.

* *

ಅಧ್ಯಕ್ಷರು : ಲೋಕಸಭಾ ಸದಸ್ಯರ ಬಗ್ಗೆ ಈ ಮನೆಯಲ್ಲಿ ಕಾಮೆಂಟ್ಸ್ ಮಾಡಬಾರದು. I don't like any comments about the Lok Sabha Members empunse thise remarks.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಗೌರವಾನ್ವಿತ ಸದಸ್ಯರಾದ ಯಾವಗಲ್‌ರವರು ಹೇಳಿದಂತಹ ಸಲಹೆಗಳನ್ನು ಸರ್ಕಾರ ಗಮನಿಸುತ್ತದೆ. ಆಗಸ್ಟ್ ಮೊದಲನೇ ವಾರ ಟ್ರಿಬ್ಯುನಲ್ ಮಾಡಬೇಕೆಂದು ಅವರು ಏನು ಕಂಪ್ಲೇಂಟ್ ಮಾಡಿದ್ದರು ನಮ್ಮನ್ನು ಅವರನ್ನು ರಾಜಿ ಮಾಡಿಸಬೇಕೆಂದು ಜಲಸಂಪನ್ಮೂಲ ಖಾತೆ ಸಚಿವರಾದ ಸನ್ಮಾನ್ಯ ಸೇಥಿಯವರು ಒಂದು ಸಭೆ ಕರೆದು ಅದನ್ನು ಮುಂದೆ ಹಾಕಿದ್ದರು. ಮುಂದಿನ ಸಭೆ ಆಗಸ್ಟ್ ಮೊದಲನೇ ವಾರದಲ್ಲಿ ನಡೆದರೆ, ಆ ಸಭೆಯಲ್ಲಿ ನಡೆಯತಕ್ಕಂತಹ ನಿರ್ಣಯ ನಡವಳಿಕೆಗಳ ಹಿನ್ನೆಲೆಯಲ್ಲಿ ಏನು ಸೂಕ್ತವಾದ ಹೆಜ್ಜೆಯನ್ನು ಇಡಬೇಕು ಆ ಹೆಜ್ಜೆಯನ್ನು ರಾಜ್ಯ ಸರ್ಕಾರ ಇಡುತ್ತದೆ. ಮಹದಾಯಿ ತಿರುವನ್ನು ಮಾಡತಕ್ಕಂಥದ್ದರ ಬಗ್ಗೆ ಕರ್ನಾಟಕ ಸರ್ಕಾರ ಸಂಪೂರ್ಣ ಬದ್ದವಾಗಿದೆ. ಆದಷ್ಟು ಬೇಗ ನಮ್ಮ ತಾಂತ್ರಿಕ ತೊಂದರೆಗಳನ್ನು ನಿವಾರಿಸಿಕೊಂಡು ಆ ಕೆಲಸ ಪ್ರಾರಂಭ ಮಾಡುತ್ತೇವೆ.

ಹುಬ್ಬಳ್ಳಿ ಧಾರವಾಡ ನಗರ ವ್ಯಾಪ್ತಿಯಲ್ಲಿರುವ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು

414 (3687) ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಜಿಲ್ಲಾವಾರ ವಿವರ ನೀಡುವುದು;

ಆ) ಹುಬ್ಬಳ್ಳಿ-ಧಾರವಾಡ ನಗರ ವ್ಯಾಪ್ತಿಯಲ್ಲಿ ಜನಸಂಖ್ಯೆ ಆಧಾರಿತ ಎಷ್ಟು ಆಹಾರ ವಲಯಗಳಿವೆ: ಎಷ್ಟು ಜನ ಆಹಾರ ನಿರೀಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ;

ಇ) ಹುಬ್ಬಳ್ಳಿಯ ಸಹಾಯಕ ನಿರ್ದೇಶಕರ ಕಾರ್ಯಾಲಯದಲ್ಲಿ ಮ್ಯಾನೇಜರ್ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸಿಬ್ಬಂದಿ ಕೊರತೆಯಿಂದ ಆಗುವ ತೊಂದರೆಗಳನ್ನು ಹೋಗಲಾಡಿಸಲು ಕೈಗೊಂಡ ಕ್ರಮಗಳೇನು?

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.